ಡೆವಲಪ್‌ಮೆಂಟ್ ಅಥಾರಿಟಿಗೆ ಬರಬೇಕು. ಏತಕ್ಕೆಂದರೆ, ಪ್ಲಾನ್ಡ್ ಡೆವೆಲಪ್‌ಮೆಂಟ್ ಆಗಬೇಕಾಗುತ್ತದೆ. ಆದುದರಿಂದ ಇದು ಮಾಡುತ್ತೇವೆ.

SRI B.I. PATIL:- For Mandal Panchayats, Zilla Parishat rules are there. Therefore, Mandal Panchayats are giving licence and electrification is going on.

SRI K.J. GEORGE:- Wherever the Urban Development Authorities are there, there the Mandal Panchayats cannot give licences. The other Mandal Panchayats can give licence we are not coming in their way. Wherever Urban Development Authority jurisdiction will come, there only they have to take prior approval. Already CDP is there, byelaws are there. They have to construct according to CDP and the byelaws.

ಐ.ಡಿ.ಎಸ್.ಎಂ.ಟಿ. ಕೇಂದ್ರ ಯೋಜನೆ.

120 (932). ಶ್ರೀ ಪೆಚ್. ವಿಶ್ವನಾಥ (ಕೆ.ಆರ್.ನಗರ):- ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷ್ಣರಾಜನಗರ ಪಟ್ಟಣವನ್ನು ಐ.ಡಿ.ಎಸ್.ಎಂ.ಟಿ. ಕೇಂದ್ರ ಯೋಜನೆಯಲ್ಲಿ ಅಭಿವೃದ್ಧಿಗಾಗಿ ಆಳವಡಿಸಲು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆಯೇ?

ಆ) ಮಾಡಿದ್ದಲ್ಲಿ ಶಿಫಾರಸ್ಸಿನ ಅಂದಾಜು ವೆಚ್ಚ ಎಷ್ಟು?

ಇ) ಪ್ರಸ್ತುತ ವರ್ಷದಲ್ಲೇ ಮಂಜೂರಾತಿ ನೀಡಿ ಕಾರ್ಯಾರಂಭ ಮಾಡಲಾಗುವುದೇ?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):-

ಅ) ಹೌದು.

ಆ) ಯೋಜನಾ ವರದಿ ತಯಾರಿಸಲಾಗುತ್ತಿದೆ. ಇದು ಪೂರ್ಣಗೊಂಡ ನಂತರ ಅಂದಾಜು ವೆಚ್ಚ ಗೊತ್ತಾಗುವುದು.

ಇ) ಕೇಂದ್ರ ಸರ್ಕಾರದಿಂದ ಸಾಲ ಬಿಡುಗಡೆಯಾದ ನಂತರ ಕಾರ್ಯ ಪ್ರಾರಂಭ ಮಾಡಲಾಗುವುದು.

ಶ್ರೀ ಪೆಚ್. ವಿಶ್ವನಾಥ್:- ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಯೋಜನಾ ವರದಿ ತಯಾರಿಸಲಾಗುತ್ತಿದೆ ಎಂದು ಹೇಳಿದ್ದಾರೆ. ಯೋಜನೆ ಬಗ್ಗೆ ನಾನು ರಾಜ್ಯದ ಕೆಲವು ಕಛೇರಿಗಳಿಗೆ ಮತ್ತು ದೆಹಲಿಗೂ ಕೂಡ ಹೋಗಿ ಬಂದಿದ್ದೇನೆ. ನಮ್ಮ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಡೈರೆಕ್ಟರೇಟ್ ನವರು ಇದು ನಮಗೆ ಸಂಬಂಧ ಇಲ್ಲ ಎಂದು ಹೇಳುತ್ತಾರೆ. ನೀವು ಟೌನ್ ಪ್ಲಾನಿಂಗ್ ಡೆವಲಪ್‌ಮೆಂಟ್‌ನವರನ್ನು ಕೇಳಿ ಎಂದು ಹೇಳುತ್ತಾರೆ. ಟೌನ್ ಪ್ಲಾನಿಂಗ್ ಡೆವಲಪ್‌ಮೆಂಟ್‌ನವರನ್ನು ಕೇಳಿದರೆ ಇದು ನಮಗೆ ಸಂಬಂಧಪಟ್ಟಿಲ್ಲ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಡೆವ ಲಪ್‌ಮೆಂಟ್‌ನವರನ್ನು ಕೇಳಿ ಎಂದು ಹೇಳುತ್ತಾರೆ. ದೆಹಲಿಯಲ್ಲೂ ಸಹ ಕರ್ನಾಟಕದವರಿಗೆ ಐ.ಡಿ.ಎಸ್.ಎಂ.ಟಿ. ಸ್ಕೀಮ್‌ನಲ್ಲಿ ಹಣ ಕೊಟ್ಟಿದ್ದೇವೆ. ಅವರು 5 ಕೋಟಿ ರೂಪಾಯಿಗಳ ಹಣ ಇದುವರೆಗೂ ಉಪಯೋಗಿಸಿಕೊಂಡಿಲ್ಲ, ಕರ್ನಾಟಕದವರಿಗೆ ಹಣ ಉಪಯೋಗಿಸಿಕೊಳ್ಳುವುದಕ್ಕೆ ಗೊತ್ತಿಲ್ಲ ಎಂದು ಆ ಡೈರೆಕ್ಟರೇಟ್‌ನವರು ಹೇಳುತ್ತಾರೆ. ಆದ್ದರಿಂದ ದಯಮಾಡಿ ಯೋಜನಾ ವರದಿ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್‌ನಲ್ಲಿ ತಯಾರು ಮಾಡುತ್ತಾರೋ ಅಥವಾ ಟೌನ್ ಪ್ಲಾನಿಂಗ್ ಡೆವಲಪ್‌ಮೆಂಟ್‌ನಲ್ಲಿ ತಯಾರು ಮಾಡುತ್ತಾರೋ? ಯಾವಾಗ ತಯಾರು ಮಾಡುತ್ತಾರೆ? ಯಾವಾಗ ಚಾಲು ಮಾಡುತ್ತೀರಿ ಹೇಳಿ.

ಶ್ರೀ ಕೆ.ಜೆ. ಜಾರ್ಜ್:- ಮಾನ್ಯ ಅಧ್ಯಕ್ಷರೆ, ಇದು ಸೆಂಟ್ರಲ್ ಗೌರ್ಮೆಂಟ್ ಸ್ಪಾನ್‌ಸಾರ್ಡ್ ಸ್ಕೀಮ್ ಐ.ಡಿ.ಎಸ್.ಎಂ.ಟಿ. ಎಂದು ಹೇಳಿ. ಇದರಲ್ಲಿ 50.50 ಮಾಡಿದ್ದೇವೆ. ಈಗಾಗಲೇ ಸುಮಾರು 27 ಟೌನ್‌ಗಳನ್ನು ನಾವು ತೆಗೆದುಕೊಂಡಿದ್ದೇವೆ. ಇದರಲ್ಲಿ ಕೆಲವು ಡೆವಲಪ್‌ಮೆಂಟ್ ವರ್ಕ್ಸ್ ಸೆಲೆಕ್ಟೆಡ್ ಟೌನ್ಸ್‌ಗೆ ಅನ್ವಯಿಸುತ್ತದೆ. ಅದರ ಪ್ರಕಾರ ರಸ್ತೆಗಳನ್ನು ಮಾಡುವುದು, ಮಂಡೀಸ್ ಮಾಡುವುದು, ಮಾರ್ಕೆಟ್ ಸ್ಯಾನಿಟೇಶನ್‌ಗೆ ಎಂದು ಹೇಳಿ

ಸುಮಾರು 104 ಕೋಟಿ ರೂಪಾಯಿಗಳನ್ನು ಒಂದು ನಗರಕ್ಕೆ ಕೊಟ್ಟಿದ್ದಾರೆ. ಈ ಹಣವನ್ನು 3-4 ವರ್ಷಗಳಲ್ಲಿ ಕೊಡುತ್ತಾರೆ. ಒಂದೇ ವರ್ಷದಲ್ಲಿ ಕೊಡುವುದಲ್ಲ. 7ನೇ ಪಂಚವಾರ್ಷಿಕ ಯೋಜನೆಯಲ್ಲಿ 27 ಪಟ್ಟಣ ಪ್ರದೇಶಗಳನ್ನು ತೆಗೆದುಕೊಂಡಿದ್ದೇವೆ. 8ನೇ ಪಂಚವಾರ್ಷಿಕ ಯೋಜನೆಗೆ 67 ಪಟ್ಟಣಗಳನ್ನು ತೆಗೆದುಕೊಳ್ಳುವುದಕ್ಕೆ ಸೇರಿಸಿ ಈಗಾಗಲೇ ಕಳುಹಿಸಿಕೊಟ್ಟಿದ್ದೇವೆ. ಇದರಲ್ಲಿ ಎಲ್ಲ 67 ಪಟ್ಟಣಗಳನ್ನು ಕೇಂದ್ರ ಸರ್ಕಾರದವರು ತೆಗೆದುಕೊಳ್ಳುವುದಿಲ್ಲ, ಯಾವ ಯಾವ ಪಟ್ಟಣ ಎಂದು ಅವರು ಆಯ್ಕೆ ಮಾಡುತ್ತಾರೆ. ಅದರ ಪ್ರಕಾರ ನಾವು ತೆಗೆದುಕೊಳ್ಳುತ್ತೇವೆ. ಆಯ್ಕೆಯಾದ ಮೇಲೆ ಟೌನ್ ಪ್ಲಾನಿಂಗ್ ಡೆವಲಪ್‌ಮೆಂಟ್‌ನವರು ಡೆವಲಪ್‌ಮೆಂಟ್ ವಿಚಾರದಲ್ಲಿ ಸ್ಕೀಮ್ ತಯಾರು ಮಾಡಿ ಅದರಲ್ಲಿ ಹಣ ವಿರ್ಚು ಮಾಡಿ ಡೆವಲಪ್‌ಮೆಂಟ್ ಮಾಡುತ್ತಾರೆ.

ಶ್ರೀ ಹೆಚ್. ವಿಶ್ವನಾಥ್:- ಈ ಸಾರಿ ನಮ್ಮ ಕೆ.ಆರ್. ಪೇಟೆ ಟೌನ್ ಅನ್ನು ದಯಮಾಡಿ ತೆಗೆದುಕೊಳ್ಳುತ್ತೀರಾ?

ಶ್ರೀ ಕೆ.ಜೆ. ಜಾರ್ಜ್:- ಮಾನ್ಯ ಅಧ್ಯಕ್ಷರೆ, ಆ 67ರಲ್ಲಿ ಕೆ.ಆರ್. ನಗರ ಪಟ್ಟಣವನ್ನು ಸಮೇತ ಕಳುಹಿಸಿದ್ದೇವೆ. ಆದರೆ ಅದು ಒಂದು ಪ್ರಯಾರಿಟಿ ಪ್ರಕಾರ 44ನೇ ಸ್ಥಾನದಲ್ಲಿ ಇದೆ. ಕೆಲವೊಂದು ಪ್ಯಾರಾಮೀಟರ್ಸ್ ಪ್ರಕಾರ 44ನೇ ಸ್ಥಾನದಲ್ಲಿದೆ. ಕೇಂದ್ರ ಸರ್ಕಾರ ಅದನ್ನು ಆಯ್ಕೆ ಮಾಡಬೇಕಾಗಿದೆ.

ಅಧ್ಯಕ್ಷರು:- 21ನೇ ಶತಮಾನದಲ್ಲಿ ಎದುರು ನೋಡುಬಹುದು ವಿಶ್ವನಾಥ್‌ರವರೇ.

ಕೋಮುಗಲಭೆಯಲ್ಲಿ ಸತ್ತವರ ಕುಟುಂಬಗಳಿಗೆ ಉದ್ಯೋಗ

28(278). ಶ್ರೀ ಸಾದತ್ ಅಲಿ ಖಾನ್, (ಚನ್ನ ಪಟ್ಟಣ):- ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಮು ಗಲಭೆಯಲ್ಲಿ ಸತ್ತವರ ಕುಟುಂಬಕ್ಕೆ ಅನುಕಂಪದ ಆಧಾರದ ಮೇಲೆ ಸರ್ಕಾರಿ ಉದ್ಯೋಗ ಕೊಡುವ ವಿಷಯವು ಸರ್ಕಾರದ ಮುಂದಿದೆಯೇ?

ಆ) ಹಾಗಿದ್ದಲ್ಲಿ, ಈ ವಿಷಯವು ಕಳೆದ ಎರಡು ವರ್ಷಗಳಿಂದ ಬಾಕಿ ಇರಲು ಕಾರಣಗಳೇನು?

ಇ) ಇನ್ನೆಷ್ಟು ಸಮಯದಲ್ಲಿ ಆ ಸಂತ್ರಸ್ತ ಕುಟುಂಬದವರಿಗೆ ಸರ್ಕಾರೀ ಉದ್ಯೋಗ ಕೊಡಲಾಗುವುದು?

ಶ್ರೀ ಧರ್ಮ ಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು):-

ಅ) ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿ ಇದೆ.

ಆ) ಈ ವಿಷಯಕ್ಕೆ ಸಂಬಂಧಪಟ್ಟ ನಿಯಮಗಳನ್ನು ರಚಿಸಬೇಕಾಗಿದ್ದು, ಸದರಿ ನಿಯಮಗಳನ್ನು ಕಾನೂನು ಇಲಾಖೆ ಹಾಗೂ ಸಿಬ್ಬಂಧಿ ಮತ್ತು ಆಡಳಿತ ಸುಧಾರಣಾ ಇಲಾಖೆಗಳ ಪರಿಶೀಲನೆಯಲ್ಲಿ ಇದೆ.

ಶ್ರೀ ಸಾದತ್ ಅಲಿ ಖಾನ್:- ಮಾನ್ಯ ಅಧ್ಯಕ್ಷರೆ, ಈ ಕ್ವಶ್ಚನ್ ಅಸೆಂಬ್ಲಿಯಲ್ಲಿ ಮೂರನೇ ಸಲ ಬರುತ್ತಿದೆ. ಕರ್ನಾಟಕದಲ್ಲಿ ಕಮ್ಯುನಲ್ ಡಿಸ್ಟರ್‌ಬೆನ್ಸಸ್‌ನಲ್ಲಿ 1990ನೇ ಸಾಲಿನಲ್ಲಿ ಸೆಪ್ಟಂಬರ್ ಮತ್ತು ಅಕ್ಟೋಬರ್ ತಿಂಗಳಲ್ಲಿ 75 ಜನ ಸತ್ತರು. ಅಂದಿನ ಮುಖ್ಯಮಂತ್ರಿಗಳಾಗಿದ್ದ ಶ್ರೀ ವೀರೇಂದ್ರ ಪಾಟೀಲರು ಸೆಪ್ಟಂಬರ್‌ನಲ್ಲಿ ರಾಮನಗರಕ್ಕೆ ಬಂದಿದ್ದರು. ಆಗ ನಾನೂ ಅವರ ಜೊತೆಯಲ್ಲಿ ಹೋಗಿದ್ದೆ. ಆಗ ಅವರು ಅನೌನ್ಸ್ ಮಾಡಿದರು. ತಕ್ಷಣ ಒಂದು ಫ್ಯಾಮಿಲಿ ಮೆಂಬರ್‌ಗೆ ಒಂದು ಕೆಲಸ ಕೊಡುತ್ತೇವೆಂದು ಅನೌನ್ಸ್ ಮಾಡಿದರು. ಮತ್ತೆ ಅಕ್ಟೋಬರ್‌ನಲ್ಲಿ ಚನ್ನರಾಯಟ್ಟಣದಲ್ಲಿ, ಬಾಕಿ ಕಡೆ ಎಲ್ಲಾ ಕಮ್ಯುನಲ್ ಡಿಸ್ಟರ್‌ಬೆನ್ಸಸ್ ಆಯಿತು. ಆಗ ಪ್ರಜೆಂಟ್ ಚೀಫ್ ಮಿನಿಸ್ಟರ್ ಎಲ್ಲಾ ಕಡೆ ಹೋಗಿದ್ದಾರೆ. ಎಲ್ಲಾ ಕಡೆ ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಒಂದು ಫ್ಯಾಮಿಲಿಗೆ ಒಂದು ಉದ್ಯೋಗ ಕೊಡುತ್ತೇವೆಂದು ಹೇಳಿದ್ದಾರೆ.

But every time the matter is under consideration ಎಂದು ಉತ್ತರ ಬರುತ್ತದೆ. ಇದು ಯಾವಾಗ ಆಗುತ್ತದೆ? ಅದಕ್ಕೆ ನನ್ನ ಪ್ರಾಬ್ಲಮ್ ಏನೆಂದರೆ, ಎಲ್ಲಾ ಕಡೆ ಮುಖ್ಯಮಂತ್ರಿಗಳು ಆಶ್ವಾಸನೆ ಕೊಟ್ಟಿದ್ದಾರೆ. ನಾವು ಎಲ್ಲಿ ಫಂಕ್ಷನ್ಸ್‌ಗೆ ಹೋಗಲಿ ಎಲ್ಲಿ ಹೊದರೂ ಅಲ್ಲಿ ಫ್ಯಾಮಿಲಿಯವರು ಬಂದು ಕೇಳುತ್ತಾರೆ. It has become a problem for me to answer them.